1-30 P.M.

ಶ್ರೀ ಎಸ್. ಎಸ್. ಅರಕೇರಿ.—ಬಿ ಪ್ರಶ್ನೆಗೆ ಉತ್ತರವಾಗಿ ಪ್ರಮೋಷನ್ ಲಿಸ್ಟ್ ಎರಡು ಸಾರಿ ರಿವೈಸ್ ಮಾಡಲಾಗಿದೆ ಎಂದು ಹೇಳಿದ್ದೀರಿ. ಮೊದಲನೆ ಸಾರಿ ಸೀನಿಯಾರಿಟಿ ಲಿಸ್ಟ್ ಮಾಡಿದಾಗ ಯಾವ ಲೀಸ್ಟ್ ಇತ್ತು ಆ ಲೀಸ್ಟ್‌ನ್ನು ಕ್ಯಾನ್ಸಲ್ ಮಾಡಿ ಎರಡನೇ ಸಾರಿ ಲಿಸ್ಟ್ ಮಾಡಲಕ್ಕೆ ಏನು ಕಾರಣ ಇತ್ತು ಎಂಬುದನ್ನು ಹೇಳುತ್ತೀರಾ ?

Sri H. V. KOUJALGI.—The Seniority list was prepared so far as the Head Office was concerned in regard to the second grade Sub-Registrars. Subsequently it was thought necessary that there were first division Clerks who were eligible for appointment as Sub-Registrars and a second list was prepared.

ಶ್ರೀ ಪಿ. ವೆಂಕಟಗಿರಿಯಪ್ಪ.—ಈ ಇಲಾಖೆಯಲ್ಲಿ ಹಳೇ ಮೈಸೂರಿನವರಿಗೆ ಪ್ರಮೋಷನ್ ಕೊಟ್ಟರೆ ಬೇರೆಯವರಿಗೆಲ್ಲ ಪ್ರಮೋಷನ್ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಪ್ರಮೋಷನ್ ಕೊಡದೇ ತಡೆಹಿಡಿಯುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

Sri H. V. KOUJALGI.—Sir, I say that is not correct.

ಶ್ರೀ ಸಿ. ಆರ್. ರಂಗೇಗೌಡ.—ರೆಗ್ಯುಲರ್ ಪ್ರಮೋಷನ್ ಬಗ್ಗೆ ಸರ್ಕಾರಕ್ಕೆ ದೂರು ಬಂದಿದೆ ಎನ್ನುವುದನ್ನು ಒಪ್ಪಿಕೊಂಡಿದ್ದೀರಿ. ಇದುವರೆಗೂ ತನಿಖೆ ನಡೆಸಿದ್ದೀರಾ ? ನಡೆಸಿದ್ದರೆ ಅದನ್ನು ತಿಳಿಸುವುದಕ್ಕೆ ಸಿದ್ಧವಾಗಿದ್ದೀರಾ ?

Sri H. V. KOUJALGI.—That is what I said. These two officers are of different grades. The second grade Sub-Registrars and first division Clerks were not getting equal opportunities. In order to see that these types of officers got equal opportunities, the rules have been amended and the defect has been remedied.

ಶ್ರೀ ಕೆ. ಎಚ್. ಪಾಟೀಲ್.—ರಿಜಿಸ್ಟ್ರೇಷನ್ ಅಂಡ್ ಕಮೀಷನರ್ ಆಫ್ ಸ್ಟ್ಯಾಂಪ್ಸ್ ಆಫೀಸರು ಬಹಳ ಕಾಲದಿಂದ ಗೆಜೆಟೆಡ್ ಆಫೀಸರು ಇದ್ದಾರೆ. ಅದರೂ ಸಹಿತ ಅವರಿಗೆ ನಿಕ್ಕತಕ್ಕ ಸೀನಿಯಾರಿಟಿ ಕೊಟ್ಟಿಲ್ಲದೇ ಇರುವುದು ಗೊತ್ತೆ ? ಹಾಗಿದ್ದರೆ ತೀವ್ರ ಪರಿಹಾರ ಕೊಡುತ್ತೀರಾ ?

Sri H. V. KOUJALGI.—I do not know whether there is such a thing or not. If there is such a thing, I will take action.

ಶ್ರೀ ಸಿ. ಆರ್. ರಂಗೇಗೌಡ.—ಪ್ರೊವಿಜನರ್ ಲಿಸ್ಟ್ ಬಗ್ಗೆ ಅಧಿಕಾರಿಗಳ ಅಬ್ಜೆಕ್ಷನ್ ಇದ್ದರೆ 13-3-69 ರಂದು ಕೊಡಬೇಕೆಂದು ನಿಗಧಿ ಮಾಡಿದ್ದೀರಿ, ಆ ಬಗ್ಗೆ ತೊಂದರೆಯಾಗಿರುವ ಗುಮಾಸ್ತರು ಒಂದು ಮನವಿ ಸಲ್ಲಿಸಿದ್ದರು, ಅದು ಇದುವರೆಗೂ ಇತ್ಯರ್ಥವಾಗಿಲ್ಲ. ಅದನ್ನು ಇತ್ಯರ್ಥಮಾಡಿ ಸೀನಿಯಾರಿಟಿ ತೀರ್ಮಾನ ಮಾಡುವುದಕ್ಕೆ ಎಷ್ಟು ದಿವಸ ಬೇಕು ?

Sri H. V. KOUJALGI.—So far as fixing seniority in various areas is concerned, it is a little complicated matter. It will take a little time. I will see that the matter is solved as early as possible.

Vacancies of Deputy Tahsildars and Sheristedars Posts in Gulbarga Division

190. Sri M. DODDANAGOUD (Siruguppa):—

Will the Minister for Revenue be pleased to state.—

(a) the number of posts of Deputy Tahsildars and Sheristedars kept vacant for more than six months in Gulbarga Division and the dates from which they are kept vacant;

(*b*) reasons for the same;

(*c*) whether this will affect the seniority of the officials who are due for promotion to the cadre of Deputy Tahsildars in the seniority list and if so, what is the remedy thought of by Government?

Sri H. V. KOUJALGI (Minister for Revenue).—

(*a*) 13 posts of Deputy Tahsildars and 6 posts of Taluk Sheristedars are kept vacant from lst June 1968 and lst July 1968 respectively.

(*b*) The above posts are to be filled up only by promoting the officials in the gradation lists of Taluk Sheristedars and First Division Clerks. These lists could not be finalised due to some doubts about the rules to be followed. Preparation of these lists has since been completed by the respective Deputy Commissioners and a consolidated Divisional Gradation list is to be finalised and published shortly.

(*c*) Their inter-se seniority is unaffected.

Sri M. DODDANAGOUD.—Is the Government aware that the Divisional Commissioner, Gulbarga, has filled up 26 posts of Deputy Tahsildars instead of 13 posts as stated in the reply ?

Sri H. V. KOUJALGI.—I do not know. I will just enquire.

ಶ್ರೀ ಎಸ್. ಎಂ. ಗುರೆಡ್ಡಿ.—ಸೀನಿಯಾರಿಟಿ ಲಿಸ್ಟ್ ತಯಾರಾಗಿಲ್ಲ, ತಯಾರಾಗುತ್ತದೆ ಎಂದು ಹೇಳುತ್ತೀರಿ. ಇದು 1956ರಿಂದ ನಡೆಯುತ್ತ ಇದೆ, ಎಷ್ಟೋ ಜನ ಡೆಪ್ಯೂಟಿ ತಹಸೀಲ್ದಾರರು, ತಹಸೀಲ್ದಾರರು ಈಗಾಗಲೇ ರಿಟೈರ್ ಆದ ಸಂದರ್ಭ ಇದೆ, ಆದಕಾರಣ ಯಾವಾಗ ಇದನ್ನು ಫೈನಲೈಸ್ ಮಾಡುತ್ತೀರಿ ಅನ್ನುವುದನ್ನು ಸ್ಪಷ್ಟವಾಗಿ ಹೇಳಲಿಕ್ಕೆ ಸಾಧ್ಯವಿದೆಯೇ ?

Sri H. V. KOUJALGI.—Sir, tl question refers to the whole State and I cannot answer. This particular question refers to Hyderabad area only.

ಶ್ರೀ ಸಿ. ಆರ್. ರಂಗೇಗೌಡ.—ಇಂಟರ್‌ಸ್ಟೇಟ್ ಸೀನಿಯಾರಿಟಿ ಲೀಸ್ಟ್ ಆಫ್ ತಹಸೀಲ್ದಾರ್ಸ್ ಮೇನ್‌ಟೈನ್ ಮಾಡಿದ್ದೀರಾ ?

Sri H. V. KOUJALGI.—The question does not refer to that.

ಶ್ರೀ ಬಾಪೂಗೌಡ.—ಗುಲ್ಬರ್ಗ ಡಿವಿಜನ್ನಿನ ಡೆಪ್ಯೂಟಿ ತಹಸೀಲ್ದಾರರು, ತಹಸೀಲ್ದಾರರು ಯಾರಿದ್ದಾರೆ ಅವರಿಗೆ ಫರ್ಸ್ಟ್ ಡಿವಿಜನ್ ಕ್ಲಾರ್ಕ್ ಪೋಸ್ಟ್‌ನಿಂದ ಪ್ರಮೋಷನ್ ಕೊಟ್ಟಿದ್ದೀರಿ, ಇದು ವರೆಗೂ ಕೂಡ ಅದು ಇತ್ಯರ್ಥವಾಗಿಲ್ಲ. ಇದರಿಂದ ಸಾಕಾದಷ್ಟು ಗಲಾಟೆ ಗೊಂದಲವಾಗಿದೆ. ಇದನ್ನು ಯಾವಾಗ ಇತ್ಯರ್ಥ ಮಾಡುತ್ತೀರಿ?

Sri H. V. KOUJALGI.—The Government is seriously enquiring into this matter and will see that inter state seniority lists are prepared as early as possible.

ಶ್ರೀ ಸದಾಶಿವಪ್ಪ ಪಾಟೀಲ್.—ಇದೀಗ ಹೇಳಿದಿರಿ ಸೀನಿಯಾರಿಟಿ ಲಿಸ್ಟ್ ತಯಾರಾಗಿಲ್ಲ ಎಂದು. ಸೀನಿಯಾರಿಟಿ ಲಿಸ್ಟ್ ತಯಾರುಮಾಡುವ ಕಾಲಕ್ಕೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಹೈದರಾಬಾದ್‌ನಲ್ಲಿ ಯಾವ ಪ್ರಕಾರ ಇತ್ತೋ ಆ ಪ್ರಕಾರ ಮಾಡುತ್ತೀರೋ ಅಥವಾ ಹಳೇ ಮೈಸೂರು ಪದ್ಧತಿ ಪ್ರಕಾರ ಮಾಡುತ್ತೀರೋ ? ಅಥವಾ ನಿಮ್ಮ ಮನಸ್ಸಿಗೆ ಬಂದವರಿಗೆ ಪ್ರಮೋಷನ್ ಕೊಡುತ್ತೀರೋ ?

ಶ್ರೀ ಎಚ್. ವಿ. ಕೌಜಲಗಿ.—ನಮ್ಮ ಮನಸ್ಸಿಗೆ ಬಂದ ಪ್ರಕಾರ ಯಾರಿಗೂ ಪ್ರಮೋಷನ್ ಕೊಡಲಿಕ್ಕೆ ಬರುವುದಿಲ್ಲ. ಲಿಸ್ಟ್ ತಯಾರು ಮಾಡಬೇಕಾದರೆ ಕಾಯಿದೆ, ರೂಲ್ಸ್ ಪ್ರಕಾರ ಮಾಡಬೇಕಾಗುತ್ತದೆ.

ಶ್ರೀ ಎಸ್. ಭೀಮಣ್ಣ.—ಬೊಂಬಾಯಿ ಏರಿಯಾದಲ್ಲಿದ್ದ ಶಿರಸ್ತೆದಾರರನ್ನು ಹೈದರಾಬಾದ್ ಏರಿಯಾದ ಡೆಪ್ಯೂಟಿ ತಹಸೀಲ್ದಾರರಿಗೆ ಈಕ್ವೇಟ್ ಮಾಡಿ ಪ್ರಮೋಷನ್ ಕೊಡುತ್ತಾ ಇದ್ದೀರಿ. ಹೈದರಾಬಾದ್ ಏರಿಯಾದ ಡೆಪ್ಯೂಟಿ ತಹಸೀಲ್ದಾರರಿಂದ ತಮ್ಮ ಹತ್ತಿರ ರೆಪ್ರಸೆಂಟೇಷನ್ ಬಂದಿದೆಯೇ? ಬಂದಿದ್ದರೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎಚ್. ವಿ. ಕೌಜಲಗಿ.—ಆ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ. ಬೇರೆ ಪ್ರಶ್ನೆ ಹಾಕಿದರೆ ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಹೈದರಾಬಾದ್ ಕರ್ನಾಟಕಕ್ಕೆ ಪ್ರತ್ಯೇಕವಾಗಿ ಸೀನಿಯಾರಿಟಿ ಲಿಸ್ಟ್ ಮಾಡುತ್ತಾ ಇದ್ದೀರಾ ಎಂಬುದನ್ನು ಸ್ವಲ್ಪ ತಿಳಿಸಬೇಕು. ಹೈದರಾಬಾದ್ ಸ್ಟೇಟಿನ ದ ಬಂದ ಡೆಪ್ಯುಟಿ ತಹಸೀಲ್ದಾರರಿಗೆ ಶಿರಸ್ತೇ ದಾರರು ಸೀನಿಯರ್ ಆಗುವುದಿಲ್ಲ ಎಂದು ನಿರ್ಧರವಾಗಿತ್ತು, ಅಂದಮೇಲೆ ಮೈಸೂರು ಸರ್ಕಾರದವರು ಅದನ್ನು ರಿವೈಸ್ ಮಾಡಿ ಬೇರೆ ರೀತಿಯಲ್ಲಿ ಮಾಡಲಿಕ್ಕೆ ಕಾರಣವೇನು?

ಶ್ರೀ ಎಚ್. ವಿ. ಕೌಜಲಗಿ.—ಇಡೀ ಸ್ಟೇಟಿಗೆ ಅನ್ವಯಿಸುವಂತೆ ಒಂದು ಕಾನೂನು ಮಾಡುವಾಗ ಎಲ್ಲ ವಿಚಾರಗಳನ್ನು ನೋಡಿ ಮಾಡಲಾಗಿದೆ.

Appointment of Village Accountants and Panchayat Secretaries

262. Sri K. R. NADA GOUDA (Yadagiri).—

Will the Minister for Revenue be pleased to state :—

(*a*) whether it has come to the notice of Government that the hereditary village officers, ' Patwaries ' are not discharging their duties honestly and efficiently, because of their uncertain position ;

(*b*) when the Government will abolish the post of hereditary village officers and in their place appoint Village Accountants of Panchayat Secretaries ?

Sri H. V. KOUJALGI (Minister for Revenue).—

(*a*) There is no uncertainty about their position. Hereditary Village offices have been abolished. Those that are continued are without hereditary rights and are certain to be replaced.

(*b*) All the Village Offices stand abolished with effect from 1st February 1963 and in their place, regularly recruited and trained Village Accountants are being posted.

Sri K. R. NADA GOUDA.—It is said that a decision has been taken in 1967 to abolish hereditary officers. May I know how many village officers are posted and how many are yet to be posted ?

Sri H. V. KOUJALGI.—I do not know whether the Hon. Member is referring to Hyderabad area or to the whole State ?

Sri K. R. NADA GOUDA.—I refer to the whole State.